# ಜನಪದ ಆರಾಧನೆ ಮತ್ತು ಆಧುನಿಕತೆ: ಭೂತಾರಾಧನೆಯನ್ನು ಅನುಲಕ್ಷಿಸಿ

**ಪ್ರಶಾಂತ್ ಎ.ಎಸ್.**

ಸಹಾಯಕ ಪ್ರಾಧ್ಯಾಪಕರು, ಭಾಷಾ ವಿಭಾಗ, ಕ್ರೈಸ್ಟ್ ವಿಶ್ವವಿದ್ಯಾಲಯ, ಬೆಂಗಳೂರು.

**DOI: https://doi.org/10.5281/zenodo.18776044**

**ABSTRACT:**

ಕರಾವಳಿ ಕರ್ನಾಟಕದ ಸಾಂಸ್ಕೃತಿಕ ಅನನ್ಯತೆಯಾದ ಭೂತಾರಾಧನೆಯು ಕೇವಲ ಪೂಜಾ ವಿಧಾನವಾಗಿರದೆ, ಸಾಮಾಜಿಕ ನ್ಯಾಯ ಮತ್ತು ಧಾರ್ಮಿಕ ನಂಬಿಕೆಗಳನ್ನು ಒಳಗೊಂಡ ಸಂಕೀರ್ಣ ಜನಪದ ವ್ಯವಸ್ಥೆಯಾಗಿದೆ. ಜಾಗತೀಕರಣ ಹಾಗೂ ಆಧುನಿಕತೆಯ ಪ್ರಭಾವದಿಂದಾಗಿ ಈ ನೆಲಮೂಲದ ಆಚರಣೆಯ ಸ್ವರೂಪದಲ್ಲಿ ಆಗುತ್ತಿರುವ ಸ್ಥಿತ್ಯಂತರಗಳನ್ನು ಇಲ್ಲಿ ಚರ್ಚಿಸಲಾಗಿದೆ. ಯಕ್ಷಗಾನದ ಪ್ರಭಾವ, ವೈದಿಕ ಆಚರಣೆಗಳ ಸೇರ್ಪಡೆ, ವೇಷಭೂಷಣಗಳಲ್ಲಿನ ಮಾರ್ಪಾಡು ಮತ್ತು ತಾಂತ್ರಿಕತೆಯ ಅಬ್ಬರಗಳು ಮೂಲ ಆರಾಧನಾ ಪದ್ಧತಿಯನ್ನು ಹೇಗೆ ರೂಪಾಂತರಿಸುತ್ತಿವೆ ಎಂಬುದರ ಕುರಿತು ವಿಶ್ಲೇಷಿಸಲಾಗಿದೆ. ವಾಣಿಜ್ಯೀಕರಣ ಮತ್ತು ಪ್ರದರ್ಶನ ಕಲೆಯಾಗಿ ಬದಲಾಗುತ್ತಿರುವ ಪ್ರಸ್ತುತ ಸನ್ನಿವೇಶದಲ್ಲಿ, ಭೂತಾರಾಧನೆಯ ಮೂಲ ಆಶಯ, ಭಕ್ತಿ ಮತ್ತು ಪಾವಿತ್ರ್ಯವನ್ನು ಉಳಿಸಿಕೊಳ್ಳುವ ಅಗತ್ಯವನ್ನು ಪ್ರತಿಪಾದಿಸಲಾಗಿದೆ. ತುಳುನಾಡಿನ ಜನಜೀವನದಲ್ಲಿ ಹಾಸುಹೊಕ್ಕಾಗಿರುವ ಈ ಪರಂಪರೆಯು ಆಧುನಿಕ ಸವಾಲುಗಳನ್ನು ಎದುರಿಸುತ್ತಿರುವ ಬಗೆಯನ್ನು ಈ ಅಧ್ಯಯನವು ಎತ್ತಿ ತೋರಿಸುತ್ತದೆ.

**KEYWORDS:**

ಭೂತಾರಾಧನೆ, ಆಧುನಿಕತೆ, ತುಳುನಾಡು, ಜನಪದ ಸಂಸ್ಕೃತಿ, ಸಾಂಸ್ಕೃತಿಕ ಪಲ್ಲಟ.

ಯಾವುದೇ ಒಂದು ಪ್ರದೇಶದ ಜನಾಂಗದ ಸಂಸ್ಕೃತಿಯನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ ನಾವು ಕೆಲವೊಂದು ವಿಶಿಷ್ಟ ಅಂಶಗಳನ್ನು, ಅನನ್ಯತೆಯನ್ನು ಕಲ್ಪಿಸಿ ನಿರೂಪಿಸುತ್ತೇವೆ. ಆದರೆ ಅದರ ಇನ್ನೊಂದು ಮಗ್ಗುಲು ನಮಗೆ ಮರೆಯಾಗಿರುವ ಸಾಧ್ಯತೆಯೂ ಇರುತ್ತದೆ. ಅಂದರೆ ಅನನ್ಯತೆಯನ್ನು ನಿರೂಪಿಸಿದ ಆ ಆಚರಣೆ, ಆರಾಧನೆ ಜಗತ್ತಿನ ಬೇರೆ ಇನ್ನಾವುದೋ ಮೂಲೆಯಲ್ಲಿ ಇರಬಹುದು. ಆದರೆ ಅದು ನಮ್ಮ ಅರಿವಿನ ವ್ಯಾಪ್ತಿಗೆ ಬರದೇ ಇರುವ ಸಾಧ್ಯತೆಯಿದೆ ಎನ್ನುವುದನ್ನು ನಾವು ಅಲ್ಲಗಳೆಯಬಾರದು. ಇವುಗಳು ತದ್ವತ್ತಾಗಿಯೋ, ತುಸು ಭಿನ್ನ ರೂಪದಲ್ಲೋ ಇರಬಹುದು. ಇವುಗಳನ್ನು ಗಮನದಲ್ಲಿಟ್ಟುಕೊಂಡು ಕರಾವಳಿಯ ಭೂತಾರಾಧನೆಯ ಮತ್ತು ಆಧುನಿಕತೆಯನ್ನು ಚರ್ಚಿಸಲಾಗಿದೆ. ಭೂತಾರಾಧನೆಯನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ 'ಭೂತಾರಾಧನೆ' ಇದು ತುಳುನಾಡಿನ ಆರಾಧನಾ ಪರಂಪರೆ ಸೃಷ್ಟಿಸಿದ ಪದವೆಂದು ಭಾವಿಸುವುದು ತಪ್ಪು. ಯಾಕೆಂದರೆ ಭೂತಗಳ ಆರಾಧನೆಯನ್ನು

ಒಟ್ಟಾಗಿ ಸೂಚಿಸುವ ಒಂದು ಪದ ತುಳುವಿನಲ್ಲಿ ಇಲ್ಲ. ಯಾಕೆಂದರೆ ಭೂತಗಳ ಆರಾಧನೆಯು ಬೇರೆ ಬೇರೆ ಪ್ರಕಾರಗಳಲ್ಲಿ ನಡೆಯುತ್ತದೆ. ಒಟ್ಟಾಗಿ ಹೇಳುವುದಾದರೆ ಆರಾಧನಾ ಮೂಲ ವೈವಿಧ್ಯವಾಗಿದೆ. ಉದಾಹರಣೆಗೆ ಹೇಳುವುದಾದರೆ ಕೋಲ, ನೇಮ, ಮೈಮೆ, ಮೆಚ್ಚಿ, ಬಂಡಿಜಾತ್ರೆ, ಜಾಲಾಟ ಇತ್ಯಾದಿ ಇವು ಹೆಸರಿನಲ್ಲಿ ಮಾತ್ರ ವೈವಿಧ್ಯತೆಗಳಲ್ಲ ಬದಲಾಗಿ ಆರಾಧನೆಯ ಸ್ವರೂಪದಲ್ಲೂ ಭಿನ್ನತೆಯಿದೆ.

ಭೂತದ ಅರ್ಥವನ್ನು ಇಂಗ್ಲಿಷ್ ಅನುವಾದದ ಮೂಲಕವೋ ಅಥವಾ ಕನ್ನಡ, ಸಂಸ್ಕೃತದ ಭೂತ ಪದಕ್ಕಿರುವ ಅರ್ಥದ ಹಿನ್ನೆಲೆಯಿಂದಲೂ ನೋಡುವುದು ಸರಿಯಲ್ಲ. ಬದಲಾಗಿ ಅದನ್ನು ತುಳುನಾಡಿನ, ತುಳುಭಾಷೆಯ ಹಿನ್ನೆಲೆಯಿಂದಲೇ ನೋಡಬೇಕು. ಇಲ್ಲವಾದರೆ ಇಂಗ್ಲಿಷ್‌ನ ಮಮ್ಮಿ ಪದಕ್ಕೂ ಇಜಿಪ್ಟ್ ದೇಶದ ಮಮ್ಮಿ ಪದದ ಅರ್ಥಕ್ಕೆ ಇರುವ ವೈರುಧ್ಯಗಳು ಇಲ್ಲಿ ಕಂಡುಬರುತ್ತವೆ. ಭೂತ ಎನ್ನುವುದು ಸಾಂಸ್ಕೃತಿಕ ಪದ. ಆದ್ದರಿಂದ ಸಾಂಸ್ಕೃತಿಕ ಸಂದರ್ಭದಲ್ಲಿ 'ಭೂತ' ಪದವು ಕನ್ನಡ ಮತ್ತು ಸಂಸ್ಕೃತಕ್ಕೆ ತುಳುವಿನ ಕೊಡುಗೆ. ಕರಾವಳಿಯ ಭೌಗೋಳಿಕತೆ ಏಕಪ್ರಕಾರವಾಗಿಲ್ಲ. ಇಲ್ಲಿರುವುದು ಕೇವಲ ಬಯಲು ಅಥವಾ ಗುಡ್ಡ ಎನ್ನುವ ಹಾಗಿಲ್ಲ. ಇಲ್ಲಿ ಗಿರಿಶ್ರೇಣಿ, ಸಮುದ್ರ, ಬೆಟ್ಟ, ಕಾಡು, ಕಣಿವೆ ಈ ಎಲ್ಲವನ್ನು ಒಳಗೊಂಡಿರುವುದು ಕರಾವಳಿ. ಹವಾಮಾನವೂ ಅಂತೆಯೇ ಸಿಡಿಲು, ಮಿಂಚುಗಳಿಂದ ಕೂಡಿದ ಮಳೆಯ ಆರ್ಭಟ, ಸದಾ ಮೊರೆಯುವ ಕಡಲು. ಭಾಷೆ ಮತ್ತು ಧರ್ಮಗಳೂ ವೈವಿಧ್ಯತೆಯಿಂದ ಇವೆಲ್ಲವು ಕರಾವಳಿ ಸಂಸ್ಕೃತಿಯನ್ನು ರೂಪಿಸಿವೆ. ಇಲ್ಲಿನ ಜನಪದ ಮತ್ತು ಆರಾಧನಾ ಪರಂಪರೆ ಇವುಗಳನ್ನು ಆಧರಿಸಿಯೇ ರೂಪುಗೊಂಡದ್ದು ಎಂಬುದನ್ನು ನಾವು ಮೂಲಭೂತವಾಗಿ ಅರ್ಥೈಸಿಕೊಳ್ಳಬೇಕು.

ಮುಖ್ಯವಾಗಿ ಕರಾವಳಿ ಜಿಲ್ಲೆಯ ಎರಡು ವಿಶಿಷ್ಟ ಸಾಂಸ್ಕೃತಿಕ ಅಂಶಗಳೆಂದರೆ ಭೂತಾರಾಧನೆ ಮತ್ತು ಯಕ್ಷಗಾನ. ಅದರಲ್ಲೂ ಜನಪದ ಆಚರಣೆಯಾದರೂ ಕೂಡ ಆರಾಧನೆಯೇ ಪ್ರಮುಖವಾಗಿರುವ ಕಾರಣಕ್ಕೆ ಅತ್ಯಂತ ಸಂಕೀರ್ಣ ಮತ್ತು ಅಂತರ್‌ವೈರುಧ್ಯಗಳಿಂದ ಕೂಡಿದ ಒಂದು ಧಾರ್ಮಿಕ ಆಚರಣೆಯಾಗಿದೆ. ಒಂದು ಜನಾಂಗದ ಅಥವಾ ಸಮುದಾಯಕ್ಕಾಗಿ ಶ್ರಮಿಸಿ ಆ ಕಾರಣಕ್ಕಾಗಿ ತಮ್ಮ ಪ್ರಾಣಾರ್ಪಣೆಯನ್ನು ಮಾಡಿದ (ಅಕಾಲ ಮರಣವನ್ನು ಹೊಂದಿದ) ನಾಯಕ/ ನಾಯಕಿಯರನ್ನು ಅವರ ಕಾಲಾನಂತರದಲ್ಲಿ ಪೂಜಿಸಿ ತಮ್ಮ ಅಭಿಷ್ಟಗಳನ್ನು ಪೂರೈಸಿಕೊಳ್ಳುವ ಕ್ರಿಯೆಯಾಗಿದೆ. ಇಲ್ಲಿರುವ ವೈರುಧ್ಯ ಏನೆಂದರೆ ಹೆಚ್ಚಿನ ಸಂದರ್ಭದಲ್ಲಿ ನಿರ್ದಿಷ್ಟ ವ್ಯಕ್ತಿಯ ಸಾವಿಗೆ ಕಾರಣರಾದ ಮೇಲ್ವರ್ಗದವರೇ ಆ ಭೂತವನ್ನು ಪೂಜಿಸುವುದು. ಆ ಭೂತಗಳನ್ನು ಕಟ್ಟುವವರು ಮತ್ತೆ ಅದೇ ತಳಸಮುದಾಯದ ನಾಯಕರು. ಹೀಗೆ ಇದೊಂದು ಸಂಕೀರ್ಣವಾದ ಜನಪದ ವ್ಯವಸ್ಥೆಯಾಗಿದೆ.

ಇದರ ಬಗೆಗೆ ಅಧ್ಯಯನ ಮಾಡುವಾಗ ಆಗುವ ತೊಡಕುಗಳು ಇತರೆ ಜನಪದ ಕಲೆ ಮತ್ತು ಆಚರಣೆಗಳನ್ನು ಅಧ್ಯಯನ ಮಾಡುವುದಕ್ಕಿಂತಲೂ

ತೊಡಕಿನದು. ಅವುಗಳನ್ನು ರೆಕಾರ್ಡ್ ಮಾಡಿಯೋ, ಫೋಟೋ, ವಿಡಿಯೋ ತೆಗೆದೋ ಅವುಗಳನ್ನು ತಂದು ಅಧ್ಯಯನ ಮಾಡಿದಾಗ ಅವುಗಳನ್ನು ಅವುಗಳ ಜೀವನ ಸಂದರ್ಭದಿಂದ ನಾವು ತಪ್ಪಿಸಿ ತಂದಂತಾಗುತ್ತದೆ. ಅವುಗಳನ್ನು ಮತ್ತೆ ಕೇಳಿದಾಗ ನಮಗೆ ಬೇರೆಯದೇ ಆದ ದೃಷ್ಟಿಕೋನ ರೂಪುಗೊಳ್ಳುತ್ತದೆ. ಆಧುನಿಕ ಸಂದರ್ಭದಲ್ಲಿ ಇದರ ಹಿಂದಿನ ಮೌಲ್ಯ ಮತ್ತು ಭಾವನೆಗಳಿಗಿಂತ ಮಾಹಿತಿ ಮುಖ್ಯವಾಗುತ್ತದೆ. ಯಾಕೆಂದರೆ ತುಳುನಾಡಿನ ಕ್ರೀಡೆಗಳೂ ಕೂಡ ಕೇವಲ ಕ್ರೀಡೆಯಾಗಿಲ್ಲ, ಅಲ್ಲಿಯೂ ಆರಾಧನೆ, ಆಚರಣೆಯಿದೆ. ಚೆನ್ನೆಮಣೆ ಆಟವನ್ನು ಸಿರಿ ಆರಾಧನೆಯ ಭಾಗವಾಗಿ ಆಡಲಾಗುತ್ತದೆ ಮತ್ತು ವರ್ಷಪೂರ್ತಿ ಆಟ ಆಡುವಂತಿಲ್ಲ, ಅದಕ್ಕೆ ಕಾಲದ ಗಡು ಇದೆ. ಕಂಬಳ ಕೃಷಿಯ ಭಾಗವಾಗಿ ಇರುವ ಆಚರಣೆ (ಪ್ರಸ್ತುತ ಸಂಪೂರ್ಣ ಕ್ರೀಡೆಯಾಗಿ ಪರಿವರ್ತನೆಗೊಂಡಿದೆ). ಇಂತಹ ಸಂದರ್ಭದಲ್ಲಿ ಮಾಹಿತಿ ಸಂಗ್ರಹ, ಅಧ್ಯಯನಗಳು ಬಹಳ ಸೂಕ್ಷ್ಮವಾದ ಸಂಗತಿಗಳ ಬಗೆಗೆ ಗಮನಿಸಬೇಕಾಗುತ್ತದೆ.

ಜಗತ್ತಿನಲ್ಲಿ ಇಂದು ಕಾಣುತ್ತಿರುವ ಧರ್ಮ, ಜನಾಂಗ, ಸಂಸ್ಕೃತಿಗಳು ಇನ್ನೂ ಹುಟ್ಟಿರದ ಸಂದರ್ಭದಲ್ಲಿಯೇ ಶಿಲಾಯುಗದ ಮಾನವನು ಪ್ರಕೃತಿಯೊಂದಿಗೆ ಒಡನಾಡಿಯಾಗಿದ್ದುಕೊಂಡು ತನ್ನದೇ ಆದ ರೀತಿಯಲ್ಲಿ ಅದರಲ್ಲಿ ದೈವಿಕತೆಯನ್ನು ಕಂಡಿದ್ದ. ಆತನ ಕನಸು, ಕಲ್ಪನೆ, ಬಯಕೆ ಮತ್ತು ಭಯಗಳೇ ಇವುಗಳನ್ನು ರೂಪಿಸಿದ್ದು. ಇಂತಹ ಒಂದು ಹಿನ್ನೆಲೆಯಿಂದಲೇ ರೂಪುಗೊಂಡದ್ದು ಭೂತಾರಾಧನೆ. ಇದೊಂದು ಪ್ರಾಚೀನ ಜನಪದ ಆರಾಧನಾ ವಿಧಾನ. ಎಲ್ಲಿಯವರೆಗೆ ಇದರ ಪ್ರಾಚೀನತೆಯನ್ನು ಒಯ್ಯಬಹುದು ಹಾಗಾದರೆ? ಸೇವ ನೇಮಿರಾಜ ಮಲ್ಲ ಅವರು ಪುಸ್ತಕವೊಂದರಲ್ಲಿ ದಾಖಲಿಸಿದಂತೆ "ಮೊಹೆಂಜೊದಾರೋದಲ್ಲಿ ಸಿಕ್ಕಿದ ಪ್ರಾಣಿಗಳ ವಿಗ್ರಹಗಳಿಗೂ ಭೂತಾರಾಧನೆಯ ವಿಗ್ರಹಗಳಿಗೂ ಫಾದರ್ ಹೆರಾಸ್‌ರವರು ಸಂಬಂಧವನ್ನು ಕಲ್ಪಿಸಿ ಭೂತಾರಾಧನೆ ಮೊಹೆಂಜೊದಾರೋ ಸಂಸ್ಕೃತಿಯಲ್ಲೇ ಅಡಕವಾಗಿತ್ತೆಂದು ಹೇಳಿದ್ದಾರೆ. ಮೊಹೆಂಜೊದಾರೋದ ವಿಗ್ರಹಾರಾಧಕರೇ ಅಲೆದಾಡುತ್ತಾ ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿಗೆ ಬಂದು ನೆಲೆಯೂರಿರಬಹುದು. ಹಾಗೆ ನೆಲೆಯೂರಿದ ಜನರೇ ಇಂದು ಭೂತಾರಾಧನೆಯಲ್ಲಿ ವೇಷ ಹಾಕುವ ನಲಿಕೆಯವರ, ಪರವರ, ಪಂಬದರ ಪೂರ್ವಜರಾಗಿರಬಹುದು ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ಏಕೆಂದರೆ ಭೂತಾರಾಧನೆಯಲ್ಲಿ ಉಪಯೋಗಿಸಲ್ಪಡುವ ಹುಲಿ, ಎತ್ತು ಮುಂತಾದ ಪ್ರತಿಮೆಗಳಿಗೂ ಮೊಹೆಂಜೊದಾರೋದಲ್ಲಿ ಸಿಕ್ಕಿದ ಅಂಥ ಅವಶೇಷಗಳಿಗೂ ತುಂಬಾ ಸಾಮ್ಯವಿದೆ. ಪುರಾತನ ಕಾಲದಲ್ಲಿ ಇಲ್ಲಿನ ಬೆಸ್ತರು ಮೆಸಪೊಟೇಮಿಯಾಕ್ಕೆ ಹೋಗಿ ಅಲ್ಲಿ ಸುಮೇರಿಯನ್ ಸಂಸ್ಕೃತಿಗೂ ಈ ಭೂತಾರಾಧನೆಯ ಅಂಶವನ್ನು ನೀಡಿದರೆಂದು ರಂಗನಾಥ ಪೂಂಜರು ತಮ್ಮ ಒಂದು ಗ್ರಂಥದಲ್ಲಿ ವಿವರಿಸಿದ್ದಾರೆ." ಇವುಗಳನ್ನು ಸಮರ್ಥವಾಗಿ ಮಂಡಿಸಲು ಆಧಾರಗಳ ಕೊರತೆಯಿದೆ. ಆದರೆ ಒಂದು ವಾದ ಬೇರೆ ಪ್ರದೇಶದಿಂದ ಈ ಆರಾಧನಾ ಪದ್ಧತಿ ಬಂತೆಂದು ವಾದಿಸಿದರೆ, ಇನ್ನೊಂದು ವಾದ ಇಲ್ಲಿನವರೇ ಸಮುದ್ರ ಮಾರ್ಗದ ಮೂಲಕ ಈ ಸಂಸ್ಕೃತಿಯನ್ನು ಅಲ್ಲಿನ ನಿವಾಸಿಗಳಿಗೆ

ಪರಿಚಯಿಸಿದರು ಎನ್ನುತ್ತದೆ.

ಆದರೆ ತುಳುನಾಡಿನ ಸಂದರ್ಭದಲ್ಲಿ ತುಳುವರ ಸಾಂಸ್ಕೃತಿಕ ಬದುಕನ್ನು ನೂರಾರು ವರ್ಷಗಳಿಂದ ಈ ಸಂಪ್ರದಾಯ ಭಾರತದ ವಿಶಿಷ್ಟ ಆರಾಧನಾ ಪ್ರಸ್ಥಾನ ರೂಪಿಸಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಅಮೃತ ಸೋಮೇಶ್ವರ ಅವರು ಹೇಳುವಂತೆ "ಇದೊಂದು ಧಾರ್ಮಿಕ ರಂಗಭೂಮಿಯಾಗಿದ್ದು, ಇದರಲ್ಲಿ ಆರಾಧನಾಂಶ, ಕಲಾತ್ಮಕಾಂಶ, ಮನೋರಂಜಕಾಂಶ, ನ್ಯಾಯ ವಿತರಣಾಂಶ ಇತ್ಯಾದಿಗಳು ಸೇರ್ಪಡೆಗೊಂಡು ಇದೊಂದು ಸಂಕೀರ್ಣ ವ್ಯವಸ್ಥೆಯೇ ಆಗಿದೆ. ಇದೊಂದು ವರ್ಣಮಯಲೋಕ, ರಮ್ಯಾದ್ಭುತ ಪ್ರಪಂಚ, ಬಣ್ಣ, ನೃತ್ಯ, ಸಂಗೀತ ಶಿಲ್ಪ, ಸಾಹಿತ್ಯಾದಿಗಳು ವಿಚಿತ್ರವಾಗಿ ಮಿಳಿತವಾಗಿರುವ ವಿಶಿಷ್ಟ ವೇದಿಕೆ. ಇದರಲ್ಲಿ ಕ್ರಿಯಾಶೀಲವಾಗುವ ಪ್ರತಿಯೊಂದು ಘಟಕದ ಆಳವಾದ ಅಧ್ಯಯನ ಕೈಗೊಳ್ಳಲು ಸಾಧ್ಯವಿದೆ. ದೈವಾರಾಧನೆಯನ್ನು ಇತಿಹಾಸಶಾಸ್ತ್ರ, ಸಾಂಸ್ಕೃತಿಕ, ಮನಃಶಾಸ್ತ್ರ, ನ್ಯಾಯಶಾಸ್ತ್ರ, ತತ್ತ್ವಶಾಸ್ತ್ರ, ಕಲಾಮೀಮಾಂಸೆ ಇತ್ಯಾದಿ ಅನೇಕ ಶಿಸ್ತುಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಬಹುದು. ಒಟ್ಟಿನಲ್ಲಿ ಈ ಆರಾಧನಾ ಪದ್ಧತಿ ತುಳುನಾಡಿನ ಜನಜೀವನದಲ್ಲಿ ಈಗಲೂ ಊರ್ಜಿತವಾಗಿಯೇ ಇರುವ ಸಂಪ್ರದಾಯವಾಗಿದೆ." ಜನಪದ ಕಲೆಯೊಂದಕ್ಕೆ ಈ ಎಲ್ಲಾ ಅಧ್ಯಯನ ಶಿಸ್ತುಗಳ ಹಿನ್ನೆಲೆಯಲ್ಲಿ ಅಧ್ಯಯನ ಮಾಡಬಹುದಾದ ಸಾಧ್ಯತೆಯೇ ವಿಶೇಷವಾಗಿದೆ. ಸೋಮೇಶ್ವರ ಅವರ ಮಾತುಗಳನ್ನು ಗಮನಿಸಿದಾಗ ಅರಿವಾಗುವುದೇನೆಂದರೆ ಇದು ಕರಾವಳಿ ಭಾಗದ ಕೇವಲ ಆರಾಧನೆಯಾಗಿ, ಆಚರಣೆಯಾಗಿ, ಕಲೆಯಾಗಿ ಉಳಿದಿಲ್ಲ ಬದಲಾಗಿ ಅದು ಜೀವನದಲ್ಲಿ ಹಾಸುಹೊಕ್ಕಾಗಿದೆ. ಅಂದರೆ ಕರಾವಳಿಯ ಬದುಕನ್ನು ಇವುಗಳಿಂದ ಪ್ರತ್ಯೇಕಿಸಿ ನಾವು ನೋಡಲು ಸಾಧ್ಯವಿಲ್ಲ. ಈ ಕಾರಣಕ್ಕಾಗಿಯೇ ಎಷ್ಟೋ ಜನಪದ ಕಲೆಗಳು ಅಳಿವಿನಂಚಿಗೆ ಸರಿದರೂ ಭೂತಾರಾಧನೆ ಕೊಂಚವೂ ಮಸುಕಾಗಿಲ್ಲ.

ಆಧುನಿಕತೆ ಎನ್ನುವುದು ಪ್ರಸ್ತುತ ಊಹೆ ಮಾಡಲು ಸಾಧ್ಯವಾಗದಷ್ಟು ವೇಗದಲ್ಲಿ ಸಾಗುತ್ತಿದೆ. ಹೊಸದನ್ನು ಹುಡುಕುವ, ಕಟ್ಟಿಕೊಳ್ಳುವ ಆತುರದಲ್ಲಿದ್ದೇವೆ. ಇವುಗಳನ್ನು ಒಪ್ಪಿಕೊಳ್ಳದೆ ಹೋದರೆ ಔಟ್‌ಡೇಟೆಡ್ ಎನ್ನುವ ಸಂಗತಿ. ಜನಜೀವನ, ತಂತ್ರಜ್ಞಾನ ಮತ್ತು ಮಾರುಕಟ್ಟೆಯಲ್ಲಿ ಆದ ಬದಲಾವಣೆಗಳು ಜಾನಪದದ ಮೇಲೂ ಆಗಿದೆ. ನವೀನತೆಗೆ ಹಂಬಲಿಸುತ್ತ ನೆಲಮೂಲದ ಸಂಸ್ಕೃತಿ ಚಹರೆಗಳು ಬದಲಾಗುತ್ತಿದೆ ಮತ್ತು ಮರೆಯಾಗುತ್ತಿದೆ. ಅನೇಕ ವೇಳೆ ನಮಗೆ ಇವೆಲ್ಲವುಗಳ ಮೇಲೆ ಪ್ರೀತಿ, ಕಾಳಜಿ ಎಲ್ಲವೂ ಇದೆ ಎಂಬುದು ಎಷ್ಟು ಸತ್ಯವೂ, ಅದೇ ರೀತಿಯಲ್ಲಿ ಅವೆಲ್ಲವುಗಳನ್ನು ಮೀರಿ ಅವುಗಳು ಕೈ ಜಾರಿ ಹೋಗುತ್ತಿದೆ ಎಂಬುದೂ ಸತ್ಯ. ನಮಗೆ ಗೊತ್ತಿಲ್ಲದೆ ಹೇಗೆ ನಮ್ಮ ಬದುಕು ಆಧುನಿಕತೆಯನ್ನು ಒಪ್ಪಿಕೊಂಡು ಬದಲಾಯಿತೋ ಹಾಗೆಯೇ ಜನಪದ ಕಲೆಗಳನ್ನು ಈ ಕಬಂಧ ಬಾಹುಗಳು ಬದಲಾಯಿಸಿದೆ. ಸದ್ಯಕ್ಕೆ ಇರುವ ದಾರಿಯೊಂದೆ ಆಧುನಿಕತೆಯಲ್ಲಿರುವ ಸಕಾರಾತ್ಮಕ ಅಂಶಗಳನ್ನು ಬಳಸಿಕೊಂಡು ಅವುಗಳನ್ನು ಉಳಿಸಬೇಕು. ಇವುಗಳಿಗೆ ಸರ್ಕಾರ, ಸಂಘಟನೆಗಳು, ಈ ಕ್ಷೇತ್ರದಲ್ಲಿ ಅನುಭವಿರುವ ತಜ್ಞರುಗಳು ಇಚ್ಛಾಶಕ್ತಿಯಿಂದ ಕೆಲಸ ಮಾಡಬೇಕು. ಸದ್ಯ ರೈತರ, ಶ್ರಮಜೀವಿಗಳು,

ಕೂಲಿಕಾರರ ಬದುಕು ಹೇಗೆ ದುಸ್ತರವಾಯಿತೋ ಹಾಗೆಯೇ ನಮ್ಮ ನಾಡಿನ ಕಲೆಗಳು ನೆಲೆಯನ್ನು ಕಳೆದುಕೊಳ್ಳುತ್ತವೆ. ಈಗಾಗಲೇ ಅನೇಕ ಜನಪದ ಕಲೆಗಳು ಇದ್ದವು ಎನ್ನುವುದಕ್ಕೆ ಕುರುಹೂ ಇಲ್ಲದಂತೆ ಜನಮಾನಸದಿಂದ ಮರೆಯಾಗಿವೆ.

ತುಳುನಾಡಿನ ಈ ಭೂತಾರಾಧನೆಯಲ್ಲಿ ಆಗಿರುವ ಆಧುನಿಕತೆಯನ್ನು ಗಮನಿಸೋಣ. ಕರ್ನಾಟಕದ ಇತರೆ ಪ್ರದೇಶ ಆಧುನಿಕತೆ ಪ್ರವೇಶಗೊಳ್ಳುವ ಮೊದಲೇ ಕರಾವಳಿಯಲ್ಲಿ ಅನೇಕ ಬದಲಾವಣೆಗಳು ನಡೆದಿದ್ದವು. ಇಂದೂ ಕೂಡ ಕರ್ನಾಟಕದ ಇತರೆ ಪ್ರದೇಶ ಬದಲಾಗುತ್ತಿರುವ ವೇಗಕ್ಕೂ ಕರಾವಳಿಯ ಬದುಕು ಬದಲಾಗುವ ವೇಗಕ್ಕೂ ತುಂಬಾ ವ್ಯತ್ಯಾಸವಿದೆ. ಆದ್ದರಿಂದ ಈ ಭಾಗದ ಕಲೆಗಳೂ ಕೂಡ ಸಹಜವಾಗಿಯೇ ಬೇಗನೆ ಅವುಗಳನ್ನು ತನ್ನಲ್ಲಿ ಅಳವಡಿಸಿಕೊಂಡು ಬಂದಿವೆ. ಮಿಶನರಿಗಳ ಆಗಮನ, ಭೂ ಮಸೂದೆ, ಹೆದ್ದಾರಿಗಳು ಮತ್ತು ಬಂದರು, ಮುಂಬೈ ಮತ್ತು ಗಲ್ಫ್ ರಾಷ್ಟ್ರಗಳ ಸಂಪರ್ಕ, ಬ್ಯಾಂಕಿಂಗ್ ವ್ಯವಸ್ಥೆ ಮತ್ತು ಶಿಕ್ಷಣ ಸಂಸ್ಥೆಗಳ ಸ್ಥಾಪನೆ ಇವೆಲ್ಲವೂ ಕರಾವಳಿ ಜನರ ಬದುಕಿನ ಮೇಲೆ ವಿಶೇಷ ಪ್ರಭಾವ ಬೀರಿದೆ. ಬದುಕು ಬದಲಾಗುತ್ತಾ ಬಂದಂತೆ ಸಹಜವಾಗಿ ತಮ್ಮ ನಂಬಿಕೆ, ಆಚರಣೆ ಆರಾಧನೆಗಳಲ್ಲಿ ಬದಲಾವಣೆಗಳನ್ನು ಸಹಜವಾಗಿ ಮಾಡಲಾಗುತ್ತದೆ. ಇದೊಂದು ಪ್ರಕ್ರಿಯೆ. ಅನೇಕ ವೇಳೆ ಇದನ್ನು ತಕ್ಷಣಕ್ಕೆ ಗುರುತಿಸಲು ಸಾಧ್ಯವಾಗುವುದಿಲ್ಲ. ಇದನ್ನು ನಿರ್ದಿಷ್ಟ ಕಾಲದ ಚೌಕಟ್ಟೊಂದನ್ನು ಇಟ್ಟುಕೊಂಡು ಅಧ್ಯಯನ ಮಾಡಿದಾಗ ಬದಲಾವಣೆಗಳು ಗೋಚರಿಸುತ್ತವೆ. ಭೂತಾರಾಧನೆ ಮೂಲದಲ್ಲಿ ಹೇಗಿತ್ತು, ಈಗ ಹೇಗಿದೆ? ಅಥವಾ ನಮ್ಮ ದೇಶದ ಬೇರೆ ಭಾಗದಲ್ಲಿ ಅಥವಾ ಕರ್ನಾಟಕದ ಇತರೆ ಪ್ರದೇಶದಲ್ಲಿ ಯಾವ ರೀತಿ ಇತ್ತು, ಪ್ರಸ್ತುತ ಯಾವ ರೀತಿಯಿದೆ ಎಂದು ನೋಡಲು ನಮಗೆ ಯಾವುದೇ ಪೂರ್ವಕಾಲದ ದಾಖಲೆಗಳು ಇಲ್ಲ. ಮೌಖಿಕವಾಗಿರುವ ಪಾಡ್ದನಗಳು ಇವೆ, ಅವುಗಳು ದೈವಗಳ ಕತೆಯನ್ನು ನಿರೂಪಿಸುತ್ತವೆಯೇ ಹೊರತು ಆರಾಧನೆಯ ಸ್ವರೂಪವನ್ನು ತಿಳಿಸಿಕೊಡುವುದಿಲ್ಲ.

ಕರಾವಳಿಯ ಎರಡು ಜನಪದ ಕಲೆಗಳು ಬಹಳ ಪ್ರಮುಖವಾಗಿದೆ; ಒಂದು ಯಕ್ಷಗಾನ ಮತ್ತು ಭೂತಾರಾಧನೆ. ಯಕ್ಷಗಾನದ ಬದಲಾವಣೆಯನ್ನು ಗುರುತಿಸಲು ಕೊಂಚ ಆಧಾರಗಳು ಮತ್ತು ಇತರೆ ಪ್ರಕಾರಗಳನ್ನು ನೋಡಿದರೆ ಸಾಧ್ಯವಾಗುತ್ತದೆ. ತಮಿಳುನಾಡಿನಲ್ಲಿರುವ ತೆರುಕೂತ್ತು, ಉತ್ತರ ಕರ್ನಾಟಕದ ದೊಡ್ಡಾಟಗಳನ್ನು ನೋಡಿದರೆ ಪ್ರಸ್ತುತ ಇರುವ ಯಕ್ಷಗಾನಕ್ಕೂ ಅಜಗಜಾಂತರ ವ್ಯತ್ಯಾಸವನ್ನು ಗುರುತಿಸಲು ಸಾಧ್ಯವಾಗುತ್ತದೆ. ಭೂತಾರಾಧನೆಯು ಕೂಡಾ ಈಗಿರುವಂತೆ ಈ ಹಿಂದೆ ಇರಲಿಲ್ಲ. ಆಧುನಿಕತೆ ಮತ್ತು ಜನರು ತಮ್ಮ ಅನುಕೂಲಕ್ಕೆ ತಕ್ಕಹಾಗೆ ಬದಲಾವಣೆ ಮಾಡಿಕೊಂಡಿದ್ದಾರೆ, ಕಲಾವಿದರೂ ಕೂಡ ವೇಷಭೂಷಣದಲ್ಲಿ, ಕುಣಿತದಲ್ಲಿ ಬದಲಾವಣೆ ಮಾಡಿಕೊಂಡಿದ್ದಾರೆ.

ಯಕ್ಷಗಾನದಲ್ಲಿರುವಂತೆ ಭೂತಾರಾಧನೆಯಲ್ಲಿಯೂ ಬ್ರಾಹ್ಮಣರ ಪಾತ್ರ ಬಹಳ ಕಡಿಮೆ. ಬರು ಬರುತ್ತಾ ವೈದಿಕ ಅಂಶಗಳು ನಿಧಾನಕ್ಕೆ ಸೇರಿಕೊಂಡಿತು. ಪ್ರಸ್ತುತ ಈ

ಆರಾಧನೆಯಲ್ಲಿ ಹೆಚ್ಚು ಬ್ರಾಹ್ಮಣರ ಪಾತ್ರ ಕಂಡುಬರುತ್ತದೆ. ದೈವಸ್ಥಾನಗಳಿಗೆ ಬ್ರಹ್ಮಕಲಶೋತ್ಸವ, ಸಂಸ್ಕೃತ ಹೆಸರುಗಳನ್ನು ಪಡೆಯುತ್ತಿರುವ ದೈವಗಳು, ಇವುಗಳು ಸದ್ಯ ಹೆಚ್ಚು ಹೆಚ್ಚು ನಡೆಯುತ್ತಿರುವ ವಿದ್ಯಮಾನ. ಭೂತಗಳಿಗೆ ನಡೆಯುವ ಕೋಲ ಅಥವಾ ನೇಮದ ಸಂದರ್ಭದಲ್ಲಿ ಮನೆಯ ಯಜಮಾನ ಅಥವಾ ಊರಿನ ಗೌಡ ಅಥವಾ ಆಯಾ ಜಾತಿಯ ಪ್ರಮುಖರು ದೈವಕ್ಕೆ ಪಾರಿಯನ್ನು ಹೇಳುವ ಕ್ರಮವಿತ್ತು. ಈಗ ಈ ಜಾಗವನ್ನು ಪಾರಿ ಹೇಳುವುದನ್ನು ಅಭ್ಯಾಸ ಮಾಡಿಕೊಂಡವರು ನಿರ್ವಹಿಸಲು ಆರಂಭಿಸಿದ್ದಾರೆ. ಇವರು ಇಂತಿಷ್ಟು ಹಣವನ್ನು ಪಡೆದು ಈ ಕಾರ್ಯವನ್ನು ನಿರ್ವಹಿಸುತ್ತಾರೆ. ಇದರಲ್ಲಿ ಹೆಚ್ಚಿನವರು ಬ್ರಾಹ್ಮಣರು ಆಗಿರುವುದು ಗಮನಿಸಬೇಕಾದ ವಿಚಾರ. ಭೂತಾರಾಧನೆ ಕರಾವಳಿ ಭಾಗದ್ದಾದರೂ ಅಲ್ಲಿಯೂ ಪುತ್ತೂರಿನಲ್ಲಿರುವಂತೆ ಬೆಳ್ತಂಗಡಿಯಲ್ಲಿ ಇಲ್ಲ, ಬೆಳ್ತಂಗಡಿಯಲ್ಲಿರುವಂತೆ ಮಂಗಳೂರಿನಲ್ಲಿ ಇಲ್ಲ. ಹೀಗೆ ಸ್ಥಳೀಯತೆ ಆಯಾಯ ಭೂತದ ಹಿನ್ನೆಲೆ ಮತ್ತು ಆರಾಧನೆಯಲ್ಲಿ ವ್ಯತ್ಯಾಸವನ್ನು ಮಾಡಿರುತ್ತದೆ. ಆದರೆ ಇವೆಲ್ಲವುಗಳ ಅರಿವಿಲ್ಲದಿರುವ ಈ ಹೊಸ ವ್ಯವಸ್ಥೆ ಎಲ್ಲಾ ಕಡೆಯೂ ಒಂದೇ ಪಠ್ಯವನ್ನು ಕಂಠಪಾಠ ಮಾಡಿಕೊಂಡು ದೈವಕ್ಕೆ ಪಾರಿ ಹೇಳುವ ಹೊಸ ಟ್ರೆಂಡ್ ಸದ್ಯ ಕಾಣಸಿಗುತ್ತದೆ. ಇಲ್ಲಿ ಮೂಲದ ಜವಾಬ್ದಾರಿ ಹೊಂದಿರುವವರನ್ನು ಕಡೆಗಣಿಸುವುದು ಒಂದು ಕಡೆಯಾದರೆ, ತಾನು ನಂಬಿದ ದೈವಗಳಲ್ಲಿ ಇನ್ಯಾರೋ ಬಂದು ತಮ್ಮ ಪರವಾಗಿ ನಿವೇದಿಸುವ ಹೊಸ ಪದ್ಧತಿ ದೈವಾರಾಧನೆಯಲ್ಲೂ ಮನೆಯವರು ಮತ್ತು ದೈವ ಅಥವಾ ಊರಿನವರು ಮತ್ತು ದೈವದ ನಡುವೆ ಮಧ್ಯವರ್ತಿಯನ್ನು ತಂದು ನಿಲ್ಲಿಸಿದೆ.

ಹರಕೆಯ ಸೇವೆಯಲ್ಲಿ ಆದ ಬದಲಾವಣೆಗಳು ಬಹಳ ವಿಶೇಷವಾದುದು. ಹರಕೆಯ ಪರಿಕಲ್ಪನೆ ಇತ್ತೀಚಿನದಲ್ಲ. ಹರಕೆಗಳಿಗೆ ತನ್ನದೇ ಆದ ಪ್ರಾಮುಖ್ಯತೆ ಇದೆ. ಆಧುನಿಕ ಯುಗದಲ್ಲೂ ಇದು ಕಡಿಮೆಯಾಗಿಲ್ಲ. ಕರಾವಳಿಯ ಸಂದರ್ಭದಲ್ಲಿ ಭೂತಗಳಿಗೆ ಸಲ್ಲಿಸುವ ಹರಕೆಯ ಕೋಲ, ನೇಮದಲ್ಲಿ ಏರಿಕೆಯಾಗಿದೆ. ಹರಕೆ, ಕಾಣಿಕೆ, ಸೇವೆ ಮುಂತಾದ ಹೆಸರಿನಲ್ಲಿ ಇವು ನಡೆಯುತ್ತಿದೆ. ಇದರ ಹಿಂದಿರುವ ಕಾರಣ ಕೇವಲ ಭಕ್ತಿ ಮಾತ್ರವಲ್ಲ, ಮನುಷ್ಯ ಸಹಜವಾದ ಒಳಿತು ಕೆಡುಕುಗಳು ಎರಡೂ ಇರುತ್ತವೆ. ಆಧುನಿಕ ಬದುಕಿನ ಶ್ರೀಮಂತಿಕೆ ಮತ್ತು ಅಸ್ಥಿರತೆಗಳು ಹೇಗೆ ದೇವರನ್ನು ಹೆಚ್ಚು ಹೆಚ್ಚು ನಂಬುವಂತೆ ಮಾಡಿದವೋ ಅದೇ ರೀತಿ ಭೂತಾರಾಧನೆಯಲ್ಲೂ ನಡೆಯುತ್ತಿದೆ. ಬದುಕಿನ ಸಂಕೀರ್ಣತೆ, ಅಭದ್ರತೆ, ಕೌಟುಂಬಿಕ ವ್ಯವಸ್ಥೆಯಲ್ಲಿ ಆದ ಸ್ಥಿತ್ಯಂತರಗಳು, ಭಯ, ಮಾನಸಿಕವಾದ ಒತ್ತಡಗಳು, ಎಲ್ಲಕ್ಕಿಂತ ಹೆಚ್ಚಾಗಿ ಒಡೆದು ಕಾಣುತ್ತಿರುವ ವಿದ್ಯಮಾನವೆಂದರೆ ಶ್ರೀಮಂತಿಕೆಯ ಪ್ರದರ್ಶನ.

ಆಧುನಿಕತೆಯು ಭಕ್ತಿ ಮತ್ತು ಭಯದ ಸ್ಥಾನವನ್ನು ಆಕ್ರಮಿಸಿದ ಕೆಲವೊಂದು ವಿಚಾರಗಳನ್ನು ಸಂಕ್ಷಿಪ್ತವಾಗಿ ನೋಡುವುದಾದರೆ; ದೊಂದಿಯ (ದಿವಟಿಗೆ) ಬೆಳಕಿನಲ್ಲಿ, ನಂತರ ಗ್ಯಾಸ್‌ಲೈಟ್ (ಪೆಟ್ರೊಮ್ಯಾಕ್ಸ್) ಬೆಳಕಿನಲ್ಲಿ, ಪ್ರಸ್ತುತ ವಿದ್ಯುತ್ ಬೆಳಕಿನಲ್ಲಿ ನಡೆಯುತ್ತಿರುವ ಸೇವೆಗಳು ಬೆಳಕಿನ ಅಗತ್ಯವನ್ನು ಮೀರಿ ವಿದ್ಯುತ್ ದೀಪಾಲಂಕಾರ ಎಂಬ ಆಡಂಬರಕ್ಕೆ ಮುಟ್ಟಿದೆ. ಭಾಷೆಯ ಬಳಕೆಯಲ್ಲಿ ಆದ

ಬದಲಾವಣೆಗಳು ದೈವ ಬಳಸುವ ಭಾಷೆ ಅನೇಕ ಸಂದರ್ಭದಲ್ಲಿ ಕಾವ್ಯಾತ್ಮಕವಾಗಿರುತ್ತದೆ. ದೈವದ ನುಡಿಯಾಗುವಾಗ ಅದು ಸಹಜವಾಗಿತ್ತು. ಅಲ್ಲಿ ಹೇಳಿಕೊಳ್ಳುವ ಬದಲಾವಣೆಯಾಗಿಲ್ಲ. ಹೆಚ್ಚು ಬದಲಾವಣೆಯಾಗಿರುವುದು ಪಾರಿಯಲ್ಲಿ. ಕಾರಣ ಬ್ರಾಹ್ಮಣರಾದರೆ ಅದಕ್ಕೆ ದೇವರಲ್ಲಿ ಪ್ರಾರ್ಥಿಸುವ ರೀತಿಯಲ್ಲಿ ಸಂಸ್ಕೃತ ಪದ ಬಳಕೆ ಮತ್ತು ದೈವಗಳ ಇಡೀ ಚರಿತ್ರೆಯನ್ನೇ ಹೇಳುವುದು. ಇತರೆ ಮೇಲ್ವರ್ಗದವರಾದರೆ ಪಾಂಡಿತ್ಯ ಪ್ರದರ್ಶನಕ್ಕೆ ಬೇಕಾದ ದೊಡ್ಡ ನಿವೇದನೆಯನ್ನು ಬರೆದು ಕಂಠಪಾಠ ಮಾಡಿ ಅಲ್ಲಿ ಒಪ್ಪಿಸುವುದು. ಇಲ್ಲಿ ಬಳಸುವ ಭಾಷೆ ಜನರು ನಿತ್ಯ ವ್ಯವಹಾರದಲ್ಲಿ ಬಳಸುವುದಕ್ಕಿಂತ ಕಾವ್ಯಾತ್ಮಕವೂ ಕಠಿಣವೂ ಆಗಿರುತ್ತದೆ.

ದೈವದ ವೇಷದಲ್ಲಿ ಬಳಸುವ ಬಣ್ಣಗಳು ಸಾಕಷ್ಟು ಬದಲಾಗಿದೆ. ಹಿಂದೆ ಬಳಸುತ್ತಿದ್ದ ಸೀಮಿತವಾದ ಕೆಂಪು, ಬಿಳಿ, ಕಪ್ಪು, ಹಳದಿ ಬಣ್ಣಗಳ ಜಾಗದಲ್ಲಿ ಬೇರೆ ಬೇರೆ ವಿಶೇಷ ಬಣ್ಣಗಳು ಸೇರಿ ಯಕ್ಷಗಾನದ ಪ್ರಸಾದನಕ್ಕೂ ದೈವ ಪ್ರಸಾದನಕ್ಕೂ ಕೆಲವೊಮ್ಮೆ ವ್ಯತ್ಯಾಸವನ್ನು ಕಂಡು ಹಿಡಿಯುವುದು ಕಷ್ಟವಾಗುತ್ತದೆ. ಯಕ್ಷಗಾನದ ಪ್ರಭಾವ ಕೇವಲ ಬಣ್ಣಗಾರಿಕೆ ಮಾತ್ರ ಸೀಮಿತವಾಗಿಲ್ಲ ಅದು ವೇಷಭೂಷಣಕ್ಕೂ ಬಂದಿದೆ ಮತ್ತು ನೃತ್ಯದಲ್ಲೂ ಅದು ಸ್ಪಷ್ಟವಾಗಿ ಕಾಣಿಸುತ್ತದೆ. ಟಾಸೆ ಮತ್ತು ಸ್ವರದ ಬಳಕೆಯ ಜೊತೆಗೆ ಕೊಳಲು ಸೇರಿಕೊಂಡಿದೆ. ಅಲ್ಲದೆ ದೈವಗಳ ಕುಣಿತಕ್ಕೆ ಸಿನಿಮಾ ಗೀತೆಗಳನ್ನು ನುಡಿಸಲಾಗುತ್ತಿದೆ. ಜೊತೆಗೆ ಈ ಹಿಂದೆ ಸಾಂಪ್ರದಾಯಿಕವಾಗಿ ಈ ವಾದ್ಯಗಳನ್ನು ನುಡಿಸುತ್ತಿದ್ದ ಊರಿನ ಕಲಾವಿದರನ್ನು ಕಡೆಗಣಿಸಿ ದೊಡ್ಡ ತಂಡಗಳನ್ನು ಕಟ್ಟಿಕೊಂಡಿರುವ ವೃತ್ತಿಪರ ಕಲಾವಿದರನ್ನು ಕರೆಸಿ ವಾದ್ಯಗೋಷ್ಠಿಯ ರೀತಿಯಲ್ಲಿ ಸೇವೆಯನ್ನು ನಡೆಸಲಾಗುತ್ತಿದೆ. ಇದರಿಂದಾಗಿ ಊರಿನ ಬಡಕಲಾವಿದರು ಅನಿವಾರ್ಯವಾಗಿ ತಮ್ಮ ಪಾರಂಪರಿಕ ವೃತ್ತಿಯನ್ನು ತ್ಯಜಿಸುತ್ತಿದ್ದಾರೆ ಮತ್ತು ಮುಂದೆ ಇದೂ ಬೇರೆ ಬೇರೆ ರೀತಿಯ ಪಲ್ಲಟಕ್ಕೆ ಕಾರಣವಾಗಲಿದೆ.

ಭೂತಕಟ್ಟುವ ತಳಸಮುದಾಯಗಳಾದ ನಲಿಕೆ, ಪರವ, ಪಂಬದ ಸಮುದಾಯಗಳಲ್ಲಿಯೂ ಅನೇಕ ಬದಲಾವಣೆಗಳು ಆಗುತ್ತಿವೆ. ಕೆಲವೊಂದು ಬದಲಾವಣೆಗಳು ಆ ಸಮುದಾಯದ ಬೆಳವಣಿಗೆಯ ದೃಷ್ಟಿಯಿಂದ ಅಗತ್ಯವೂ ಹೌದು. ಶಿಕ್ಷಣ, ಉದ್ಯೋಗದ ವಿಚಾರಕ್ಕೆ ಬಂದರೆ ಹೇಳಿಕೊಳ್ಳುವ ಮಹತ್ತರವಾದ ಬದಲಾವಣೆ ಆಗಿದೆ ಎಂದು ಹೇಳಿಕೊಳ್ಳಲಾಗದಿದ್ದರೂ ಅವರು ಶಿಕ್ಷಿತರಾಗುತ್ತಿದ್ದಾರೆ. ಆದ್ದರಿಂದ ಹಿಂದಿನ ಕಾಲದಲ್ಲಿ ನಡೆಯುತ್ತಿದ್ದ ಮಟ್ಟಿಗಿನ ಶೋಷಣೆಗಳು ಈಗಿಲ್ಲ. ಈ ಸಮುದಾಯಗಳ ಮಹಿಳೆಯರ ಶಿಕ್ಷಣ ಇನ್ನೂ ಹೇಳಿಕೊಳ್ಳುವ ಮಟ್ಟಿಗೆ ಇಲ್ಲ ಮತ್ತು ಅವರಲ್ಲಿರುವ ಅದ್ಭುತ ಕಲೆಗಾರಿಕೆಗೆ ಇನ್ನೂ ಮನ್ನಣೆ ಸಿಕ್ಕಿಲ್ಲ. ಇನ್ನು ಅವರು ಭೂತಾರಾಧನೆಯ ಕಟ್ಟುಕಟ್ಟಳೆಯ ವಿಚಾರಕ್ಕೆ ಬಂದರೆ ಹಿಂದಿನ ನಿಷ್ಠೆ ಸಹಜವಾಗಿ ಕಡಿಮೆಯಾಗಿದೆ. ಸೇವೆ ಮಾಡಿಸುವವರು ಹೇಳುವ ಟೈಮಿಗೆ ಮುಗಿಯಬೇಕು, ಸ್ವಲ್ಪ ಬೇಗ ಮುಗಿಸಿ ಇಂತಹ ಮಾತುಗಳ ಕಾರಣದಿಂದ ಯಕ್ಷಗಾನದ ರೀತಿಯಲ್ಲಿ ಕಾಲಮಿತಿಯ ಕೋಲವನ್ನೋ, ನೇಮವನ್ನೋ ನೋಡಿದ ಹಾಗಾಗುತ್ತದೆ. ಇದರಿಂದ ಈ ಹಿಂದೆ ಇದ್ದ ವಿವರವಾದ ತಾಳ್ಮೆ ಇಲ್ಲವಾಗಿದೆ. ಸಂಧಿಗಳನ್ನು ಹಾಡುವುದೂ

ಕೂಡಾ ಶಾಸ್ತ್ರಕ್ಕಿಷ್ಟು ಸಾಕು ಎಂಬಂತಾಗಿದೆ. ಈ ಎಲ್ಲಾ ಕಾರಣದಿಂದ ಅವಸರದ, ಗಡಿಬಿಡಿಯ ಆರಾಧನೆಯಾಗಿ ಬದಲಾಗುತ್ತಿದೆ. ಇದರಿಂದ ಒಂದು ರಾತ್ರಿಯಲ್ಲಿ ಇಂತಿಷ್ಟು ದೈವಗಳನ್ನು ಕಟ್ಟಿ ಮುಗಿಸುವ ಮತ್ತು ಅದಕ್ಕೆ ಇಂತಿಷ್ಟು ಪ್ಯಾಕೇಜ್ ರೂಪದ ಸಂಭಾವನೆ ಪಡೆಯುವ ಪದ್ಧತಿಗಳು ಚಾಲ್ತಿಗೆ ಬಂದಿದೆ. ಇದರಿಂದ ಭೂತದ ಹರಕೆ ಸೇವೆಗಳು ನಿಧಾನವಾಗಿ ಶ್ರೀಮಂತನಾದರೆ ಮಾತ್ರ ಮಾಡಲು ಸಾಧ್ಯ, ಅಲ್ಲದೆ ಬಡವನಾದರೆ ಸಾಲ ಮಾಡಿಯೇ ಮಾಡಬೇಕು ಅನ್ನುವಲ್ಲಿಗೆ ಬಂದು ನಿಂತಿದೆ.

ಭೂತಾರಾಧನೆಯ ಮೂಲ ಸ್ವರೂಪಕ್ಕೆ ಬೇಕಾದ ವ್ಯವಸ್ಥೆಗಿಂತ ಅಪಿಯರೆನ್ಸ್ ಚೆನ್ನಾಗಿರಬೇಕು ಮತ್ತು ವಿಡಿಯೋ ಚೆನ್ನಾಗಿ ಬರಬೇಕು ಅನ್ನೋ ಕಾರಣಕ್ಕಾಗಿ ಡೆಕೋರೇಶನ್‌ಗಳು ಹೆಚ್ಚಾಗಿವೆ. ಭೂತದ ಕೋಲದಲ್ಲಿ ಭಕ್ತಿ, ಕತೆ, ಚರಿತ್ರೆ ಇವುಗಳ ಬದಲಾಗಿ ಫೋಟೋ ತೆಗೆಯುವುದು, ಅಲ್ಲಿನ ಊಟ, ವ್ಯವಸ್ಥೆಗಳ ಬಗೆಗೆ ಮಾತಾಡುವುದರಲ್ಲೇ ಸಮಯ ಕಳೆದು ಹೋಗುತ್ತಿದೆ. ಹಿಂದೆ ಭೂತದ ಕೋಲ, ನೇಮ ನೋಡಿದರೆ ಆ ಕೋಲದ ಬಗೆಗೆ ವಾರಗಟ್ಟಲೆ ಮಾತುಕತೆಗಳು ನಡೆಯುತ್ತಿದ್ದವು. ಆ ಸಂದರ್ಭದಲ್ಲಿ ಇಂತಹ ಹರಕೆಗಳೂ ಕಡಿಮೆ, ಈಗ ಅವುಗಳಿಗೆ ಕೊರತೆಯಿಲ್ಲ. ಇವುಗಳು ಕ್ಷುಲ್ಲಕ ಅನ್ನಿಸಬಹುದಾದರೂ ಇದು ಜನಪದದಲ್ಲಿ ಆದ ಬಹುದೊಡ್ಡ ಬದಲಾವಣೆಯೇ ಆಗಿದೆ. ಯಾಕೆಂದರೆ ಇದರ ಪರಿಣಾಮ ನಾವೀಗ ಹೊಂದಿಕೊಂಡಷ್ಟು ಸರಳವಾಗಿರುವುದಿಲ್ಲ. ಮುಂದೊಂದು ದಿನ ಸಾಮಾನ್ಯನ ಕೈಯಿಂದ ಈ ಪರಂಪರೆ ಖಂಡಿತವಾಗಿಯೂ ಕೈಜಾರುತ್ತದೆ.

ಭೂತಾರಾಧನೆಯನ್ನು ಈ ಮೊದಲೇ ತಿಳಿಸಿದಂತೆ ಅನೇಕ ಮಗ್ಗುಲುಗಳಿಂದ ಅಧ್ಯಯನ ಮಾಡಲು ಸಾಧ್ಯ. ಇದರ ಒಳಗಿನ ತಿರುಳಿನಲ್ಲಿಯೂ ಅನೇಕ ಬದಲಾವಣೆಯಾಗುತ್ತಿದೆ. ಕೋಲ ನೇಮಗಳಿಗಿಂತಲೂ ಹೆಚ್ಚು ಆಧುನಿಕತೆಯ ಪ್ರಭಾವಕ್ಕೆ ಒಳಗಾಗಿರುವುದು ಭೂತ ಸ್ಥಾನದ ನಿರ್ಮಾಣ, ಭೂತದ ಕಟ್ಟೆ, ಭೂತದ ಕಲ್ಲಿನಲ್ಲಿ ಆದ ಬದಲಾವಣೆ. ಮೊಗದಲ್ಲಿ, ಮಣೆ–ಮಂಚಾವಿನಲ್ಲಿ, ಅಗೆಲು, ತಂಬಿಲ ಇವುಗಳಲ್ಲಿ ಆದ ಬದಲಾವಣೆಗಳೂ ಮುಖ್ಯವೇ. ಲೇಖನದ ಮಿತಿಯಲ್ಲಿ ಇವೆಲ್ಲವನ್ನೂ ಒಂದೇ ಕಡೆ ವಿಸ್ತಾರವಾಗಿ ಚರ್ಚಿಸಲು ಸಾಧ್ಯವಾಗುವುದಿಲ್ಲ. ಜಾಗತೀಕರಣದ ನಂತರದಲ್ಲಿ ಮಾಹಿತಿ, ವ್ಯವಹಾರ, ಮನರಂಜನೆ, ಲಾಭ ಇವುಗಳು ಮುನ್ನೆಲೆಗೆ ಬಂದವು. ಕಾಂತಾರದಂತಹ ಸಿನಿಮಾ ಮೇಲ್ನೋಟ್ಟದಲ್ಲಿ ಮನರಂಜನೆಯನ್ನು ನೀಡಿ ನಿರ್ಮಾಪಕರಿಗೆ ಒಳ್ಳೆಯ ಲಾಭ, ನಿರ್ದೇಶಕರಿಗೆ ಹೆಸರು ಮತ್ತು ಹಣ ಎರಡನ್ನೂ ತಂದುಕೊಟ್ಟಿರಬಹುದು. ಆದರೆ ಜನಪದ ಆರಾಧನೆಯೊಂದಕ್ಕೆ ಇದರಿಂದ ಅನೇಕ ಹೊಡೆತಗಳೂ ಇವೆ. ಪರದೆಯಲ್ಲಿ ನೋಡುವುದು ಮಾಹಿತಿಯಷ್ಟೇ, ಅಲ್ಲಿ ನಂಬಿಕೆಯಿಲ್ಲ ಮತ್ತು ಅಲ್ಲಿ ಈ ಕಲೆಯ ಕುರಿತಾದ ಯಾವ ಬದ್ಧತೆಯೂ, ಕಾಳಜಿ ಇಲ್ಲ. ಲಾಭ ಮತ್ತು ನಂಬಿಕೆ, ಕಾಳಜಿಗಳನ್ನು ಒಂದೇ ತೂಕದಲ್ಲಿ ಇಡಲಾಗುವುದಿಲ್ಲ. ಯಾವುದಾದರೂ ಒಂದನ್ನು ಆಯ್ಕೆ ಮಾಡಬೇಕು.

ಒಟ್ಟು ಭೂತಾರಾಧನೆ ಕರಾವಳಿಯ ಜನಪದ ಆರಾಧನೆಯಾಗಿದೆ. ಜನಪದ

ಎಂದಾಕ್ಷಣ ಇತರೆ ಜನಪದ ಕಲೆಗಳ ಹಾಗೆ ಇದರ ಪ್ರದರ್ಶನ ಸಾಧ್ಯವೇ? ಇದು ಕೂಡ ಮೆರವಣಿಗೆ, ಉತ್ಸವಗಳಲ್ಲಿ ಬಳಸಿಕೊಳ್ಳಬಹುದೇ ಎಂದರೆ ಇಲ್ಲ. ಇದು ನಿರ್ದಿಷ್ಟ ಕಾಲ ಮತ್ತು ನಿಯಮಗಳಿಗೆ ಒಳಪಟ್ಟು ನಡೆಯುವ ಆರಾಧನೆ. ಆದ್ದರಿಂದ ಇದನ್ನು ಇತರೆ ಜನಪದ ಕಲೆಗಳಿಗಿಂತ ವಿಶೇಷವಾಗಿ ನಡೆಸಿಕೊಂಡು ಬರಲಾಗುತ್ತಿದೆ. ಅಲ್ಲದೆ ಇದಕ್ಕೆ ಗಡಿಗಳ ವ್ಯಾಪ್ತಿಯಿದೆ. ಈ ಗಡಿಗಳನ್ನು ಮೀರಿ ಇವು ಚಲಿಸಿಲ್ಲ. ಯಕ್ಷಗಾನ ಕರಾವಳಿಯ ಕಲೆಯಾದರೂ ಅದು ರಾಜ್ಯ, ದೇಶಗಳ ಗಡಿಯನ್ನು ಮೀರಿ ಬೆಳೆದಿದೆ. ಒಂದೇ ಪ್ರದೇಶದ ಎರಡು ವಿಭಿನ್ನ ಕಲೆಗಳು ದಾರಿಯಲ್ಲಿ ಸಾಗಿಬಂದು ಜನಮಾನಸದಲ್ಲಿ ನಿಂತಿವೆ. ಆದ್ದರಿಂದ ಈ ಕಲೆಯು ಆಧುನೀಕರಣಕ್ಕೆ ಸಿಕ್ಕಿ ಬದಲಾಗುತ್ತಿದೆ. ಕಲೆ ಮುಂದಿನ ಜನಾಂಗಕ್ಕೆ ಉಳಿಯಬೇಕಾದರೆ ಕಾಲದೊಂದಿಗೆ ಅದು ಸಾಗಬೇಕು. ಉದ್ದಟತನದಿಂದ ನಿಂತರೆ ಅದು ಮರೆಯಾಗುತ್ತದೆ. ಆದರೆ ಇದು ಜನರ ಅರಿವು ಮತ್ತು ಪ್ರಜ್ಞೆಯ ವ್ಯಾಪ್ತಿಯಲ್ಲಿಯೇ ಇರಬೇಕು ಇಲ್ಲವಾದರೆ ಅದು ತನ್ನ ಮೌಲ್ಯವನ್ನು ಕಳೆದುಕೊಂಡು ನಾಶವಾಗುತ್ತದೆ.

**ಪರಾಮರ್ಶನ ಗ್ರಂಥಗಳು:**

1. ಚಂದ್ರಶೇಖರ ನಂಗಲಿ ವಿ., (2010), ಈಗಳೆ ಸಾಧ್ಯ, ಬೆಂಗಳೂರು: ಕನ್ನಡ ಸಂಘ, ಕ್ರೈಸ್ಟ್ ಯೂನಿವರ್ಸಿಟಿ.
2. ಕೀರ್ತಿನಾಥ ಕುರ್ತಕೋಟಿ, (2006), ಉರಿಯ ನಾಲಿಗೆ, ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
3. ಬೋರಲಿಂಗಯ್ಯ ಹಿ.ಚಿ., (2015), ಕರ್ನಾಟಕ ಜನಪದ ಕಲೆಗಳ ಕೋಶ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
4. ವಾಮನ ನಂದಾವರ, (2014), ಕರಾವಳಿ ಆಚರಣೆಗಳು, ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
5. ಲಕ್ಷ್ಮೀ ಜಿ. ಪ್ರಸಾದ್, (2021), ಕರಾವಳಿಯ ಸಾವಿರದೊಂದು ದೈವಗಳು, ಬೆಂಗಳೂರು: ಮಾತೃಶ್ರೀ ಪ್ರಕಾಶನ.
6. ಬೋರಲಿಂಗಯ್ಯ ಹಿ.ಚಿ., (2011), ಕಾಡು ಕಾಂಕ್ರಿಟ್ ಮತ್ತು ಜಾನಪದ, ಬೆಂಗಳೂರು: ಸ್ವಪ್ನ ಬುಕ್ ಹೌಸ್.
7. ಪುರುಷೋತ್ತಮ ಬಿಳಿಮಲೆ, (2008), ಜನ ಸಂಸ್ಕೃತಿ, ಬೆಂಗಳೂರು: ಕನ್ನಡ ಸಂಘ, ಕ್ರೈಸ್ಟ್ ಯೂನಿವರ್ಸಿಟಿ.
8. ವೀರಪ್ಪ ಮೊಯಿಲಿ ಎಂ., (2008), ತೆಂಬರೆ, ಬೆಂಗಳೂರು: ಕನ್ನಡ ಸಂಘ, ಕ್ರೈಸ್ಟ್ ಯೂನಿವರ್ಸಿಟಿ.
9. ಅಮೃತ ಸೋಮೇಶ್ವರ, (2007), ತುಳುವ ಜಾನಪದ: ಕೆಲವು ನೋಟಗಳು, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
10. ಯದುಪತಿ ಗೌಡ, (2001), ತುಳುನಾಡ್‌ದ ನಲಿಕೆಲು, ಮಂಗಳೂರು: ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ.